**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:ಮಂಗಳೂರು ವಿಭಾಗ:ಮಂಗಳೂರು**

ಸಂ:ಕರಾಸ:ಮಂವಿ:ಸಂ:ವಾ: 1461 :2022-23 ದಿನಾಂಕ:25.08.2022

## ಇ-ಟೆಂಡರ್ ಪ್ರಕಟಣೆ ಸಂಖ್ಯೆ:06/2022-23
## (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

************************

ಕ.ರಾ.ರ.ಸಾ.ನಿಗಮ. ಮಂಗಳೂರು ವಿಭಾಗದ ವ್ಯಾಪ್ತಿಗೆ ಬರುವ ಉಡುಪಿಯ ಬನ್ನಂಜೆಯಲ್ಲಿ ನೂತನವಾಗಿ ಪ್ರಾರಂಭಗೊಂಡಿರುವ ಉಡುಪಿ ಡಾ.ವಿ.ಎಸ್.ಆಚಾರ್ಯ ಬಸ್ಸುನಿಲ್ದಾಣದಲ್ಲಿರುವ ಮೊದಲ ಅಂತಸ್ತು ಮತ್ತು ಎರಡನೇ ಅಂತಸ್ತು ಎರಡೂ ಸೇರಿ ಒಂದೇ ಪರವಾನಿಗೆ ನೀಡುವ ಸಲುವಾಗಿ 'As is where is basis" ಆಧಾರದಲ್ಲಿ ಏಕೈಕ ಪರವಾನಿಗೆಗೆ 10 ವರ್ಷದ ಅವಧಿಗೆ (ಪ್ರತಿ ವರ್ಷ ಶೇ.05ರ ಪರವಾನಿಗೆ ಶುಲ್ಕದ ಹೆಚ್ಚಳದೊಂದಿಗೆ) ಪರವಾನಿಗೆ ನೀಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ-ಟೆಂಡರ್ ದಸ್ತಾವೇಜುಗಳನ್ನು ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ "https://eproc.karnataka.gov.in"ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ-ಟೆಂಡರ್‌ನಲ್ಲಿ ಭಾಗವಹಿಸುವವರು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸೂಚಿಸಿರುವ ನಿಗದಿತ ದಾಖಲಾತಿಗಳೊಂದಿಗೆ ಆನ್‌ಲೈನ್ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕ:14:09.2022ರಂದು ಸಮಯ 16.00 ಗಂಟೆಯವರೆಗೆ ಸಲ್ಲಿಸುವುದು. ಅರ್ಜಿದಾರರು ಮಳಿಗೆಗೆ ನಿಗದಿಪಡಿಸಿರುವ ಅರ್ಜಿ ಶುಲ್ಕ ಮತ್ತು ಅನ್ವಯಿಸುವ ಜಿಎಸ್‌ಟಿ ಮೊತ್ತದ ಡಿ.ಡಿ ಹಾಗೂ ಇ.ಎಂ.ಡಿ ಮೊತ್ತದ ಮೂಲ ಡಿ.ಡಿಗಳನ್ನು, ಇ-ಪೋರ್ಟ್‌ನಲ್ಲಿ ಅಪ್‌ಲೋಡ್ ಮಾಡಿರುವ ಇತರ ಅಗತ್ಯ ದಾಖಲಾತಿಗಳೊಂದಿಗೆ ಮಂಗಳೂರು ವಿಭಾಗೀಯ ಕಛೇರಿಯ ಸಂಚಾರ ಶಾಖೆಯಲ್ಲಿ ಇಟ್ಟಿರುವ ಟೆಂಡರ್ ಪೆಟ್ಟಿಗೆಯಲ್ಲಿ ದಿನಾಂಕ:15.09.2022 ರಿಂದ ದಿನಾಂಕ:16.09.2022ರವರೆಗೆ ಕಛೇರಿ ಸಮಯ ಬೆಳಗ್ಗೆ 10.00ರಿಂದ ಸಂಜೆ 05.00 ಗಂಟೆಯವರೆಗೆ ಸಲ್ಲಿಸುವುದು. ಇ-ಟೆಂಡರ್ ತೆರೆಯುವ ದಿನಾಂಕ:17.09.2022 ರಂದು ಸಮಯ ಬೆಳಗ್ಗೆ 11.00 ಗಂಟೆಗೆ. (ಯಾವುದೇ ತಾಂತ್ರಿಕ ದೋಷವಿಲ್ಲದಿದ್ದಲ್ಲಿ).

ಒಂದನೇ ಅಂತಸ್ತು ಮತ್ತು ಎರಡನೇ ಅಂತಸ್ತಿನಲ್ಲಿರುವ ವಾಣಿಜ್ಯ ಮಳಿಗೆಗಳ(ಹಾಲ್) ವಿವರ ಕೆಳಕಂಡಂತಿದೆ.

ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 787/2017 , 794/2018 ಮತ್ತು 809/2021 ಹಾಗೂ ಅದರ ತಿದ್ದುಪಡಿ ಆದೇಶದಂತೆ ಇ-ಟೆಂಡರ್ ವಿವರ :

| ಕ್ರ.ಸಂ | ಬಸ್ ನಿಲ್ದಾಣದ ಹೆಸರು | ಮಳಿಗೆಯ ವಿವರ | ವಿಸ್ತೀರ್ಣ (ಚ.ಅ) | ಪರವಾನಿಗೆ ಅವಧಿ | ಕನಿಷ್ಠ ಮಾಸಿಕ ಪರವಾನಗಿ ಶುಲ್ಕ(ಜಿಎಸ್ಟಿ ಹಾಗೂ ಇನ್ನಿತರ ಶುಲ್ಕ ಒಳಗೊಂಡಿರುವುದಿಲ್ಲ (ರೂ.ಗಳಲ್ಲಿ) | ಡಿ.ಡಿ.ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಇ-ಪ್ರೊಕ್ಯೂರ್ ಮೆಂಟ್ ಮೂಲ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) |
|---|---|---|---|---|---|---|---|---|
| 01 | ಉಡುಪಿ ಡಾ.ವಿ.ಎಸ್. ಆಚಾರ್ಯ | ಹಾಲ್. ಮಳಿಗೆ ಸಂಖ್ಯೆ: 15 ಕಛೇರಿ ಬಳಕೆ/ವಾಣಿಜ್ಯ ಬಳಕೆ (ಬೃಹತ್ ಮಳಿಗೆ/ಯಾತ್ರಿ ನಿವಾಸ/ಡಾರ್ಮಿಟರಿ) | 50058.19 * | 10ವರ್ಷ | 1001164/- | 3002992 | 500/- | 3540/- |
| | * ಮೇಲ್ಕಂಡ ಮೊದಲ ಅಂತಸ್ತು ವಿಸ್ತೀರ್ಣ. 24634.49 ಚ.ಅಡಿ ಮತ್ತು ಎರಡನೇ ಅಂತಸ್ತು ವಿಸ್ತೀರ್ಣ 25423.70 ಚ.ಅಡಿ ಒಟ್ಟು ವಿಸ್ತೀರ್ಣ 50058.19ಚ.ಅಡಿ ಮಳಿಗೆಗಳಿಗೆ 'As is where is basis" ಆಧಾರದಲ್ಲಿ ಏಕೈಕ ಪರವಾನಿಗೆ ನಿಗದಿಪಡಿಸಲಾಗಿರುತ್ತದೆ. ಸದರಿ ಅಂತಸ್ತುಗಳ ಶುಚಿತ್ವ ನಿರ್ವಹಣೆಯನ್ನು ಒಳಗೊಂಡು ಒಟ್ಟು ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ ನಿಗದಿಪಡಿಸಿದ್ದು, 10 ವರ್ಷದ ಅವಧಿಗೆ ಪರವಾನಿಗೆ ಅವಧಿ ನಿಗದಿಪಡಿಸಲಾಗಿರುತ್ತದೆ. | | | | | | | |

| ಕ್ರ.ಸಂ | ವಿವರ | ದಿನಾಂಕ | ಸಮಯ |
|---|---|---|---|
| 1 | ಇ-ಟೆಂಡರ್ ಅರ್ಜಿಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | 14.09.2022 | 16:00 |
| 2 | ಇ-ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ) | 17.09.2022 | 11:00 |
| 3 | ಅರ್ಜಿದಾರರು ಮಳಿಗೆಗೆ ನಿಗದಿಪಡಿಸಿರುವ ಅರ್ಜಿ ಶುಲ್ಕ ಅನ್ವಯಿಸುವ ಜಿಎಸ್‌ಟಿ ಹಾಗೂ ಇ.ಎಂ.ಡಿ ಮೊತ್ತದ ಮೂಲ ಡಿ.ಡಿಗಳನ್ನು ಇ-ಪೋರ್ಟ್‌ನಲ್ಲಿ ಅಪ್‌ಲೋಡ್ ಮಾಡಿರುವ ಇತರ ಅಗತ್ಯ ದಾಖಲಾತಿಗಳೊಂದಿಗೆ ಮಂಗಳೂರು ವಿಭಾಗೀಯ ಕಛೇರಿಯ ಸಂಚಾರ ಶಾಖೆಯಲ್ಲಿ ಇಟ್ಟಿರುವ ಟೆಂಡರ್ ಪೆಟ್ಟಿಗೆಯಲ್ಲಿ ಸಲ್ಲಿಸುವ ದಿನಾಂಕ ಮತ್ತು ಸಮಯ (ಕಛೇರಿ ಸಮಯ ಬೆಳಗ್ಗೆ 10.00ರಿಂದ 17.00ವರೆಗೆ) | ದಿ:15.09.2022ರ ಸಮಯ 10:00 ರಿಂದ ದಿ:16.09.2022ರ ಸಮಯ 17:00ರವರೆಗೆ | |

Scanned by CamScanner

ವಿಶೇಷ ಸೂಚನೆ:

1) ಇ-ಟೆಂಡರ್ ಪ್ರಕಟಣೆಯಲ್ಲಿ ಮಳಿಗೆಗಳಿಗೆ ನಿಗದಿಪಡಿಸಿದ ಇ.ಎಂ.ಡಿ ಮೊತ್ತದಲ್ಲಿ ರೂ.500-00 ಗಳನ್ನು ಮಾತ್ರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸುವುದು ಉಳಿದ ಇ.ಎಂ.ಡಿ ಮೊತ್ತವನ್ನು ಡಿ.ಡಿ.ಮೂಲಕ ಪಡೆದು ಸದರಿ ಡಿ.ಡಿಯ ಹಿಂಭಾಗದಲ್ಲಿ ತಮ್ಮ ಹೆಸರು, ಬಿಡ್ ಮಾಡುವ ಮಳಿಗೆಯ ಹೆಸರು & ಮಳಿಗೆಯ ಸಂಖ್ಯೆಯನ್ನು ನಮೂದಿಸಿ, ಸದರಿ ಡಿ.ಡಿಯ ಜರಾಕ್ಸ್ ಪ್ರತಿಯನ್ನು ಇತರೆ ದಾಖಲಾತಿಗಳೊಂದಿಗೆ ಅಪ್‌ಲೋಡ್ ಮಾಡುವುದು.

2) ಇ-ಪ್ರೊಕ್ಯೂರ್‌ಮೆಂಟ್ ಭಾಗವಹಿಸುವ ಬಿಡ್‌ದಾರರು ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವ ಅಪ್‌ಲೋಡ್ ಮಾಡಿರುವ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು, ಇ.ಎಂ.ಡಿ ಮತ್ತು ಅರ್ಜಿ ಶುಲ್ಕದ ಮೂಲ ಡಿ.ಡಿ ಯೊಂದಿಗೆ ದಿನಾಂಕ:15.09.2022 ರಿಂದ ದಿ:16.09.2022ರ ಕಛೇರಿ ಅವಧಿ ಸಮಯ ಬೆಳಗ್ಗೆ 10:00ರಿಂದ ಸಮಯ 17:00ರ ಗಂಟೆಯ ಒಳಗೆ ವಿಭಾಗೀಯ ಕಛೇರಿ ಸಂಚಾರ ಶಾಖೆಯಲ್ಲಿರುವ ಟೆಂಡರ್ ಬಾಕ್ಸ್‌ನಲ್ಲಿ ಹಾಕುವುದು.

3) ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿದ ಮಳಿಗೆಗೆ ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕವನ್ನು ನಿಗದಿಪಡಿಸಿದ್ದು, ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕವು ಜಿಎಸ್‌ಟಿ ಹಾಗೂ ಅನ್ವಯಿಸುವ ಇತರ ಶುಲ್ಕವನ್ನು ಒಳಗೊಂಡಿರುವುದಿಲ್ಲ. ಬಿಡ್ಡುದಾರರು ಇ-ಟೆಂಡರ್‌ನಲ್ಲಿ ನಮೂದಿಸುವ ಮೊತ್ತವನ್ನು ಕೇವಲ ಮಾಸಿಕ ಪರವಾನಿಗೆ ಶುಲ್ಕವೆಂದು ಮಾತ್ರ ಪರಿಗಣಿಸಲಾಗುವುದು. ಆಯ್ಕೆಗೊಂಡ H1 ಪರವಾನಿಗೆದಾರರು ತಾವು ಸೂಚಿಸಿದ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಜಿಎಸ್‌ಟಿ ಹಾಗೂ ಅನ್ವಯಿಸುವ ಇತರ ಶುಲ್ಕಗಳನ್ನು ಪ್ರತೀ ಮಾಹೆ ಸಂದಾಯಮಾಡತಕ್ಕದ್ದು.

4) ಉಡುಪಿಯ ಡಾ.ವಿ.ಎಸ್.ಆಚಾರ್ಯ ಬಸ್ಸುನಿಲ್ದಾಣದ ಮೊದಲನೆ ಅಂತಸ್ತು ಮತ್ತು ಎರಡನೇ ಅಂತಸ್ತು ಎರಡೂ ಹಾಲ್‌ಗಳು ಸೇರಿ ಒಂದೇ ಪರವಾನಿಗೆ ನೀಡುವ ಸಲುವಾಗಿ 'As is where is basis" ಆಧಾರದಲ್ಲಿ ಏಕೈಕ ಪರವಾನಿಗೆ ನಿಗದಿಪಡಿಸಲಾಗಿರುತ್ತದೆ. ಸದರಿ ಎರಡೂ ಅಂತಸ್ತುಗಳ ಶುಚಿತ್ವ ನಿರ್ವಹಣೆಯನ್ನು ಒಳಗೊಂಡು ಪರವಾನಿಗೆ ಶುಲ್ಕ ನಿಗದಿಪಡಿಸಲಾಗಿರುತ್ತದೆ.

5) ಉಡುಪಿಯ ಡಾ.ವಿ.ಎಸ್.ಆಚಾರ್ಯ ಬಸ್ಸುನಿಲ್ದಾಣದ ಮೊದಲನೆ ಅಂತಸ್ತು ಮತ್ತು ಎರಡನೇ ಅಂತಸ್ತು ಎರಡೂ ಹಾಲ್‌ಗಳು ಸೇರಿ ಒಂದೇ ಪರವಾನಿಗೆಗೆ 'As is where is basis" ಆಧಾರದಲ್ಲಿ ಏಕೈಕ ಪರವಾನಿಗೆ ನೀಡುವ ಸಲುವಾಗಿ ಹತ್ತು(10) ವರ್ಷದ ಅವಧಿಗೆ ಪರವಾನಿಗೆ ಅವಧಿ ನಿಗದಿಪಡಿಸಲಾಗಿರುತ್ತದೆ.

6) ಒಂದನೆ ಅಂತಸ್ತು ಮತ್ತು ಎರಡನೇ ಅಂತಸ್ತನ್ನು ಕಛೇರಿ ಬಳಕೆ/ವಾಣಿಜ್ಯ ಬಳಕೆ/ಯಾತ್ರಿನಿವಾಸ ಡಾರ್ಮಿಟರಿ ಮಳಿಗೆಗೆ ಉದ್ದೇಶಿಸಿ ಪರವಾನಿಗೆ ನಿಗದಿಪಡಿಸಲಾಗಿದ್ದು ಸದರಿ ಮಳಿಗೆಯಲ್ಲಿ ನಿಗಮಕ್ಕೆ ವ್ಯತಿರಿಕ್ತ ಉಂಟುಮಾಡುವ, ಕಾನೂನು ಬಾಹಿರ ಹಾಗೂ ಕಾನೂನಿಂದ ನಿಷೇಧಿಸಲ್ಪಟ್ಟ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ.

7) ಆಯ್ಕೆಯಾದ ಬಿಡ್ಡುದಾರರು/ಪರವಾನಿಗೆದಾರರು ಮೊದಲನೇ ಅಂತಸ್ತು ಮತ್ತು ಎರಡನೇ ಅಂತಸ್ತಿನಲ್ಲಿ ಉದ್ದೇಶಿಸಿರುವ ವ್ಯವಹಾರ ಕುರಿತಂತೆ ಮಾಹಿತಿಯನ್ನು ಹಾಗೂ ಪೂರಕ ದಾಖಲಾತಿಗಳನ್ನು ನಿಗಮಕ್ಕೆ ಸಲ್ಲಿಸಿ ಅನುಮತಿ ಪಡೆಯಬೇಕಿರುತ್ತದೆ.

8) ಆಯ್ಕೆಯಾಗುವ ಪರವಾನಿಗೆದಾರರಿಗೆ ಉಪಪರವಾನಿಗೆ ನೀಡಲು ಅವಕಾಶವಿರುತ್ತದೆ.

9) ಪರವಾನಿಗೆದಾರರು ಉಪಪರವಾನಿಗೆ ನೀಡಿರುವ ಕುರಿತು ಉಪಪರವಾನಿಗೆದಾರರ ಮಾಹಿತಿಯೊಂದಿಗೆ ದಾಖಲಾತಿಗಳನ್ನು ನಿಗಮಕ್ಕೆ ಸಲ್ಲಿಸುವುದು.

10) ಇ-ಟೆಂಡರ್‌ನ ಪ್ರಕಟಣೆಯ ಮೊದಲನೆ ಅಂತಸ್ತು ಮತ್ತು ಎರಡನೇ ಅಂತಸ್ತಿನ ಏಕೈಕ ಪರವಾನಿಗೆದಾರರಿಗೆ ಬಸ್ಸುನಿಲ್ದಾಣದಲ್ಲಿನ ಪಾರ್ಕಿಂಗ್ ಸ್ಥಳಾವಕಾಶದ ವಿಸ್ತೀರ್ಣದಲ್ಲಿ ತಲಾ 2000ಚ.ಅಡಿ ವಿಸ್ತೀರ್ಣದಂತೆ ಒಟ್ಟು.4000ಚ.ಅಡಿ ವಿಸ್ತೀರ್ಣವನ್ನು ಪರವಾನಿಗೆದಾರರಿಗೆ ಮೀಸಲಿರಿಸಲಾಗಿದೆ.

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಮಂಗಳೂರು ವಿಭಾಗ, ಮಂಗಳೂರು 575004 ಇವರಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ ಹಾಗೂ ಸಂಪರ್ಕಿಸುವ ದೂರವಾಣಿ ಸಂಖ್ಯೆ:-

ವಿಭಾಗೀಯ ಸಂಚಾರ ಅಧಿಕಾರಿ-7760990702 & ಸಹಾಯಕ ಸಂಚಾರ ವ್ಯವಸ್ಥಾಪಕರು -7760990711.

ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ:ಮಂಗಳೂರು ವಿಭಾಗ.

Scanned by CamScanner